ಈ ಕಾರಣದಿಂದ ಪತನೀರಾವರಿ ಕಾರ್ಪೋರೇಷನ್‌ನಲ್ಲಿರತಕ್ಕಂಥದ್ದು ಈ ಬಜೆಟ್‌ನಲ್ಲಿ ಬರುವುದಿಲ್ಲ. ಮೈನರ್ ಇರಿಗೇಷನ್‌ನಲ್ಲಿ ಬರತಕ್ಕಂಥ ಪತ ನೀರಾವರಿ ಮಾತ್ರ ಈ ಬಜೆಟ್‌ನಲ್ಲಿ ಬರುತ್ತದೆ. ಅದಕ್ಕೆ ಒಂದು ಸಪರೇಟ್ ಬಜೆಟ್ ಇದೆ. ಅದಕ್ಕೆ ಹತ್ತು ಕೋಟಿ ರೂಪಾಯಿಗಳನ್ನು ಸಹಿತ ಕೊಡುತ್ತೇವೆಂದು ಪಿ.ಎಲ್.ಡಿ. ಬ್ಯಾಂಕ್. ಮತ್ತು ಪಿ.ಸಿ.ಎಲ್.ಡಿ. ಬ್ಯಾಂಕ್‌ನವರು ಒಪ್ಪಿಕೊಂಡಿರುತ್ತಾರೆ. ಜನರಲ್ ಮ್ಯಾನೇಜರ್ ಬಂದು ನಮ್ಮ ಎಂ.ಡಿ. ಜೊತೆಯಲ್ಲಿ ಮತ್ತು ನಮ್ಮ ಜೊತೆಯಲ್ಲಿ ಡಿಸ್‌ಕಸ್ ಮಾಡಿ ಎಷ್ಟು ಹಣಬೇಕಾದರೂ ಕೊಡುತ್ತೇವೆನ್ನತಕ್ಕ ಮಾತನ್ನು ಈಗಾಗಲೇ ಹೇಳಿದ್ದಾರೆ. ಸುಮಾರು ಆರು ವರ್ಷಗಳಿಂದ ಸುಮ್ಮನೆ ಇದ್ದಂಥ ಪತ ನೀರಾವರಿಗಳನ್ನು ನಾವು ಜಾಲನೆ ಮಾಡುತ್ತಿದ್ದೇವೆ. ಇವತ್ತು ಕಾವೇರಿ ಬೇಸಿನ್‌ನಲ್ಲಿ ಸುಮಾರು 20 ಲಿಫ್ಟ್ ಇರಿಗೇಷನ್‌ಗಳನ್ನು ಕೈಗೊಳ್ಳುತ್ತಿದ್ದೇವೆ. ಸುಮಾರು ಹತ್ತುಕೋಟಿಗೂ ಮಿಂಚಿದಂಥ ಒಂದು ಅಂದಾಜನ್ನು ಈಗಾಗಲೇ ನಬಾರ್ಡ್‌ನವರು ಪಾಸ್‌ಮಾಡಿದ್ದು. ಇವತ್ತು ಆ ಕೆಲಸಗಳು ಪ್ರಾರಂಭ ಮಾಡತಕ್ಕಂಥ ಸ್ಥಿತಿಯಲ್ಲಿವೆ. ಆದ್ದರಿಂದ ಈ ಒಂದು ಅಸೆಂಬ್ಲಿ ಅಧಿವೆಶನ ಮುಗಿದ ಕೂಡಲೇ ಅಡಿಗಲ್ಲು ಹಾಕಿಸುವ ಕಾರ್ಯಕ್ರಮವಿದೆ. ಕೃಷ್ಣಾ ಮತ್ತು ಕಾವೇರಿ ಬೇಸಿನ್ ಯೋಜನೆಯಲ್ಲಿ ಸುಮಾರು 20 ಯೋಜನೆಗಳನ್ನು 10 ಕೋಟಿ ರೂಪಾಯಿಗಳಿಗೂ ಮಿಕ್ಕಿ ವೆಚ್ಚಮಾಡತಕ್ಕಂಥ ಯೋಜನೆಗಳನ್ನು ಕೈಗೊಳ್ಳುತ್ತಿದ್ದೇವೆ. ಈ ಯೋಜನೆಗೆ ತಾವು ಅಡಿಗಲ್ಲು ಹಾಕಬೇಕೆಂದು ಈಗಾಗಲೇ ನಾವು ಮಾನ್ಯಮುಖ್ಯಮಂತ್ರಿಗಳನ್ನು ಪ್ರಾರ್ಥನೆ ಮಾಡಿಕೊಂಡಿದ್ದೇವೆ. ಅವರು ಅದಕ್ಕೆ ಒಪ್ಪಿ ಹಣವನ್ನು ಸಹಿತ ಬಿಡುಗಡೆ ಮಾಡುತ್ತೇವೆಂದು ಹೇಳಿರುತ್ತಾರೆ. ಅದನ್ನು ಕೂಡ ಚುರುಕುಗೊಳಿಸುತ್ತಿದ್ದೇವೆನ್ನುವ ಮಾತನ್ನು ಹೇಳುತ್ತೇನೆ. ಮಾನ್ಯ ನಾಗಪ್ಪನವರು ಹೇಳಿದಂಥ ಕಾರ್ಯಕ್ರಮ ಏನಿವೆ ಅದನ್ನು ಸಹಿತ ಕೈಗೊಳ್ಳಲು ಪ್ರಯತ್ನ ಮಾಡುತ್ತೇವೆನ್ನುವ ಮಾತನ್ನು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ.

ಶ್ರೀಮತಿ ಮೋಟಮ್ಮನವರೆ ತಮ್ಮ ಪ್ರಶ್ನೆಯನ್ನು ಹೆಚ್.ಯು.ಡಿ.ಗೆ ಟ್ರಾನ್ಸ್‌ಫರ್ ಮಾಡಿದ್ದಾರೆ. ಆದ್ದರಿಂದ ತಮ್ಮ ಪ್ರಶ್ನೆಯನ್ನು ಮುಂದೆ ತೆಗೆದುಕೊಳ್ಳೋಣ.

ಶ್ರೀಮತಿ ಮೋಟಮ್ಮ : ಮಾನ್ಯ ಉಪಾಧ್ಯಕ್ಷಿಣಿಯವರೇ. ಇದು ಬಹಳ ಮುಖ್ಯವಾದ ಪ್ರಶ್ನೆಯಾಗಿರುತ್ತದೆ.

ಉಪಾಧ್ಯಕ್ಷರು : ಇದು ಯುವಜನಸೇವಾ ರಾಜ್ಯಮಂತ್ರಿಗಳಿಗೆ ಬರುವುದಿಲ್ಲ. ಆದ್ದರಿಂದ ಹೆಚ್.ಯು.ಡಿ.ಗೆ ಟ್ರಾನ್ಸ್‌ಫರ್ ಮಾಡಲಾಗಿದೆ.

ಶ್ರೀಮತಿ ಮೋಟಮ್ಮ : ಹೆಚ್.ಯು.ಡಿ. ಬಂದಾಗ ಅದನ್ನು ಹಾಕಿಕೊಳ್ಳಬೇಕೆಂದು ಕೇಳಿಕೊಳ್ಳುತ್ತೇನೆ.

ಉಪಾಧ್ಯಕ್ಷರು : ಶ್ರೀಯುತ ಬಿ.ಎಂ. ಇದನಬ್ಬನವರೆ ತಮ್ಮ ಪ್ರಶ್ನೆಗೆ 15 ದಿವಸ ಟೈಮ್ ಕೇಳಿದ್ದಾರೆ. ಆದ್ದರಿಂದ ಆ ಪ್ರಶ್ನೆಯನ್ನು ಮುಂದೆ ತೆಗೆದುಕೊಳ್ಳುತ್ತೇವೆ.

ಬೆಂಗಳೂರು - ಮೈಸೂರು ಹೆದ್ದಾರಿಯನ್ನು ರಾಷ್ಟ್ರೀಯ ಹೆದ್ದಾರಿಯನ್ನಾಗಿ ಪರಿವರ್ತಿಸಿವುದು

289 (1497) ಶ್ರೀ ಚಿಕ್ಕಮಾದು (ಪುಣಸೂರು) : ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬೆಂಗಳೂರು - ಮೈಸೂರು ಮಡಿಕೇರಿ ಮಾರ್ಗವಾಗಿ ಮಂಗಳೂರಿಗೆ ಹೋಗುವ ರಾಜ್ಯ ಹೆದ್ದಾರಿಯ ಉದ್ದ :

ಅ) ಈ ರಾಜ್ಯ ಹೆದ್ದಾರಿಯನ್ನು ರಾಷ್ಟ್ರೀಯ ಹೆದ್ದಾರಿಯನ್ನಾಗಿ ಪರಿವರ್ತಿಸುವ ಪ್ರಸ್ತಾವನೆಯು ಭಾರತ ಸರ್ಕಾರದಲ್ಲಿ (10-15 ವರ್ಷಗಳಿಂದ ಬಾಕಿ ಇರುವುದು ನಿಜವೇ;

ಇ) ಹಾಗಿದ್ದಲ್ಲಿ ರಾಜ್ಯ ಹದ್ದಾರಿಯನ್ನು ರಾಷ್ಟ್ರೀಯ ಹೆದ್ದಾರಿಯನ್ನಾಗಿ ಪರಿವರ್ತಿಸಲು ಸರ್ಕಾರವು ಮಾಡಿದ ಪ್ರಯತ್ನಗಳೇನು?

ಶ್ರೀ ಜಿ. ಹೆಚ್. ಅಶ್ವತ್ಥ್ ರೆಡ್ಡಿ (ಲೋಕೋಪಯೋಗಿ ಸಚಿವರು):

ಅ) 385 ಕಿಲೋ ಮೀಟರುಗಳು

ಆ) ಹೌದು

ಇ) ರಾಜ್ಯ ಸರ್ಕಾರವು ಈ ಬಗ್ಗೆ ಕೇಂದ್ರ ಸರ್ಕಾರವನ್ನು ಸತತವಾಗಿ ಒತ್ತಾಯಿಸುತ್ತಿದೆ. ಇತ್ತೀಚಿಗೆ ಅಂದರೆ ಡಿಸೆಂಬರ್ 91ರಲ್ಲಿ ಮಾನ್ಯ ಲೋಕೋಪಯೋಗಿ ಸಚಿವರು ಕೇಂದ್ರ ಸರ್ಕಾರದ ಭೂಸಾರಿಗೆ ಸಚಿವರೊಡನೆ ಈ ವಿಷಯವಾಗಿ ಚರ್ಚಿಸಿರುತ್ತಾರೆ. ಕೇಂದ್ರ ಸಚಿವರು 8ನೇ ಪಂಚವಾರ್ಷಿಕ ಯೋಜನೆಯ ಪ್ರಸ್ತಾವನೆಗಳ ಬಗ್ಗೆ ನಿರ್ಧಾರವಾದ ನಂತರ ಪರಿಶೀಲಿಸಲಾಗುವುದು ಎಂದು ತಿಳಿಸಿರುತ್ತಾರೆ.

ಬೆಳ್ತಂಗಡಿ ತಾಲ್ಲೂನಲ್ಲಿ ಎಂ.ಎಂ.ಪಿ. ಯೋಜನೆ.

290 (1363) ಶ್ರೀ ಗಂಗಾಧರ ಗೌಡ (ಬೆಳ್ತಂಗಡಿ) : ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಬೆಳ್ತಂಗಡಿ ತಾಲ್ಲೂಕಿನಲ್ಲಿ ಎಂ.ಎಂ.ಪಿ. ಯೋಜನೆಯಲ್ಲಿ ಮಂಜೂರಾದ ರಸ್ತೆಗಳೆಷ್ಟು;

ಆ) ಈ ರಸ್ತೆಗಳು ದುರಸ್ತಿಗಳಿಲ್ಲದೆ ಸಂಪೂರ್ಣ ನಾಶವಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಇ) ಈ ರಸ್ತೆ ದುರಸ್ತಿ ಮಾಡಲು ಸರ್ಕಾರ ತೆಗೆದುಕೊಂಡ ಕ್ರಮವೇನು;

ಈ) ಎಂ.ಎಂ.ಪಿ.ರಸ್ತೆ ರಚನೆ ಮಾಡಿ ಸೇತುವೆ ರಚನೆ ಮಾಡದೇ ಇರುವುದರಿಂದ ಹಳ್ಳಿ ಪ್ರದೇಶದ ಜನರಿಗೆ ಮಳೆಗಾಲದಲ್ಲಿ ಆಗುವ ತೊಂದರೆಗಳನ್ನು ಸರ್ಕಾರ ಯಾವ ರೀತಿಯಲ್ಲಿ ಸರಿಪಡಿಸುವುದು?

ಶ್ರೀ ಜಿ.ಹೆಚ್. ಅಶ್ವತ್ಥ್ ರೆಡ್ಡಿ (ಲೋಕೋಪಯೋಗಿ ಸಚಿವರು) :

ಅ) ಪ್ರಸಕ್ತ ಸಾಲಿನಲ್ಲಿ ಬೆಳ್ತಂಗಡಿ ತಾಲ್ಲೂಕಿನಲ್ಲಿ 11 ಕಾಮಗಾರಿಗಳು ಕನಿಷ್ಠ ಅವಶ್ಯಕತೆ ಯೋಜನೆ (ಎಂ.ಎನ್.ಪಿ)ಯಲ್ಲಿ ಮಂಜೂರಾಗಿರುತ್ತದೆ.

ಆ) ಈ ರಸ್ತೆಗಳು ಕೆಟ್ಟಿರುವುದು ಸರ್ಕಾರದ ಗಮನಕ್ಕೆ ಬಂದಿದೆ.

ಇ) ಈ ರಸ್ತೆಗಳು ಜಿಲ್ಲಾ ಪರಿಷತ್ತಿನ ವ್ಯಾಪ್ತಿಯಲ್ಲಿ ಬರುತ್ತವೆ. ಜಿಲ್ಲಾ ಪರಿಷತ್ತಿನಲ್ಲಿ ಲಭ್ಯವಿರುವ ಅನುದಾನದ ಮಿತಿಯಲ್ಲಿ ಈ ರಸ್ತೆಗಳನ್ನು ಆದಷ್ಟು ಸುಸ್ಥಿತಿಯಲ್ಲಿಡಲಾಗುತ್ತಿದೆ.